## ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಸ್ಪೆಷಲ್ ಕೇಸ್ (ಎಸ್.ಸಿ./ಎಸ್.ಟಿ.) ನಂ. 08/2021

ಪ್ರ.ವ.ಬೋ. ದಿನಾಂಕ – 10.01.2024

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | – | ಮೂಡಲಗಿರಿಯಪ್ಪ | ಫ್ರಾ.ಸಾ. | – | 14 |
| ತಂದೆಯ ಹೆಸರು | – | ಕರಿಯಪ್ಪ | ಚಾ.ಸಾ. | – | 14 |
| ವಯಸ್ಸು | – | 43 ವರ್ಷ | | | |
| ಉದ್ಯೋಗ | – | ವ್ಯವಸಾಯ | | | |
| ವಾಸ ಸ್ಥಳ | – | ಕಣಿವೆಜೋಗಿಹಳ್ಳಿ | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಖ್ಯ ವಿಚಾರಣೆ – ವಿಶೇಷ ಸರ್ಕಾರಿ ಅಭಿಯೋಜಕರಿಂದ –**

1. ಚಾಸಾ1 ನನ್ನ ತಂಗಿ . ಚಾಸಾ 10 ರಿಂದ 13 ಗೊತ್ತು . ನ್ಯಾಯಾಲಯದ ಮುಂದಿರುವ ಆರೋಪಿಗಳೆಲ್ಲರೂ ಗೊತ್ತು ಅವರು ಗೊಲ್ಲ ಜನಾಂಗದವರು , ನಾವು ಬೋವಿ ಜನಾಂಗದವರು .

2. ದಿಃ 01.08.2020 ರಂದು ಬೆಳಗ್ಗೆ ಸುಮಾರು 11 ಗಂಟೆಯಲ್ಲಿ ನಾನು , ಚಾಸಾ 1 , 10 ರಿಂದ 13 ಚಾಸಾ 1 ರವರ ಜಮೀನಿನಲ್ಲಿ ಇದ್ದಾಗೆ ಗಲಾಟೆಯಾಯಿತು . ಅಲ್ಲಿಗೆ ಆರೋಪಿಗಳು ಬಂದು ಅಡಿಕೆ ಗಿಡಗಳನ್ನು ಕಿತ್ತು ಹಾಕಿ , ಮನೆಗೆ ಬೆಂಕಿ ಇಟ್ಟರು . ಡ್ರಿಪ್ ಪೈಪ್ ಇತ್ತು ಅದನ್ನು ಸುಟ್ಟು ಹಾಕಿದರು . ಅಡಿಕೆ ಗಿಡಗಳನ್ನು ಸುಟ್ಟು ಹಾಕಿದರು . ದೊಣ್ಣೆ , ಮಚ್ಚು ತೆಗೆದುಕೊಂಡು ಹಲ್ಲೆ ಮಾಡಿದರು . ನಾಗಮ್ಮ , ಕರಿಯಪ್ಪ ,ಶ್ರೀನಿವಾಸ್ , ತೇಜಸ್ವಿನಿ , ಹನುಮಂತಪ್ಪ ರವರಿಗೆ ಹೊಡೆದರು . ವಡ್ಡ ಹಾಗೆ ಹೀಗೆ ಎಂದು ಜಾತಿ ನಿಂದನೆ ಮಾಡಿದರು . ಊರಿನಿಂದ ಬಿಡಿಸುತ್ತೇವೆ ಎಂದು ದೌರ್ಜನ್ಯ ಮಾಡಿದರು . ಜಮೀನಿನಲ್ಲಿ ದಾರಿ ಬೇಕು ಎಂದು ಗಲಾಟೆ ಮಾಡಿದರು . ಈ ಎಲ್ಲಾ ವಿಚಾರವನ್ನು ಪೋಲೀಸರಿಗೆ ಹೇಳಿದ್ದೇನೆ . ಗಲಾಟೆ ಕಾಲದಲ್ಲಿ ಶ್ರೀನಿವಾಸ ಮೊಬೈಲ್‌ನಲ್ಲಿ ವಿಡಿಯೋ ಮಾಡಿದರು .

**– ಪಾಟೀ ಸವಾಲು – 1 ರಿಂದ 11 ನೇ ಆರೋಪಿಗಳ ಪರವಾಗಿ – ಶ್ರೀ ಬಿ.ಎ.ಕೆ ವಕೀಲರಿಂದ –**

3 . ಪ್ರಸ್ತುತ ಘಟನೆ ನಡೆಯುವ ಮೊದಲು ಕೆಂಚಪ್ಪ , ಚಾಸಾ 10 ಹಾಗೂ ಇತರರ ವಿರುದ್ಧ ದೂರು ನೀಡಿದ್ದರು ಎಂದರೆ ಸರಿ . ಸುಮಾರು 1 ವರೆ ಗಂಟೆ ಕಾಲ ಗಲಾಟೆ ನಡೆಯಿತು . ಯಾರ ಯಾವ ಕೈಯಲ್ಲಿ ಯಾವ ಯಾವ ಆಯುಧ ಇತ್ತು ಎಂದು ಜನ ಜಾಸ್ತಿ ಇದ್ದಕಾರಣ ಹೇಳಲಾಗುವುದಿಲ್ಲ . ಚಾಸಾ10 ರವರ ತಲೆಗೆ ಪೆಟ್ಟಾಗಿತ್ತು . ಚಾಸಾ 11 ರವರ ಬೆನ್ನಿಗೆ ಏಟಾಗಿತ್ತು . ಚಾಸಾ 1 ರವರಿಗೆ ಮೈ ಕೈಗೆಲ್ಲಾ ಪೆಟ್ಟಾಗಿತ್ತು , ರಕ್ತ ಬಂದಿರಲಿಲ್ಲ . ಪೋಲೀಸರು ಈ ಪ್ರಕರಣದಲ್ಲಿ ನನ್ನ ಹೇಳಿಕೆ ಪಡೆದಿಲ್ಲ . ವಡ್ಡ ಎಂದು ಜಾತಿ ನಿಂದನೆ ಮಾಡಿದರು ಎಂದು ನಾನು ಪೋಲೀಸರಿಗೆ ಹೇಳಿಲ್ಲ . ಶ್ರೀನಿವಾಸ ಯಾವ ಮೊಬೈಲ್ ನಿಂದ ವಿಡಿಯೋ ಮಾಡಿದರು ಎಂದು ನನಗೆ ಗೊತ್ತಿಲ್ಲ . ಶ್ರೀನಿವಾಸ ಆಗ ಸ್ಟಾಫ್ ನರ್ಸಿಂಗ್ ಓದುತ್ತಿದ್ದ . ಆತನ ನನ್ನ ಸಂಬಂಧಿಕ ಎಂದರೆ ಸರಿ . ಅಲ್ಲಿದ್ದ ಅಡಿಗೆ ಗಿಡಗಳು 2 ವರ್ಷದ್ದು . 6– 7 ಅಡಿ ಬೆಳೆದಿದ್ದವು . ಅವುಗಳನ್ನು ಬೇರು ಸಮೇತ ಕೀಳಲಾಗುವುದಿಲ್ಲ ಎಂದರೆ ಸರಿ . ಬಹಳ ಜನ ಸೇರಿದ್ದರಿಂದ ಯಾರು ಅಡಿಕೆ ಗಿಡಗಳನ್ನು ಕಿತ್ತರು ಎಂದು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ . ಯಾವುದೇ ಘಟನೆ ನಡೆದಿಲ್ಲ , ಆರೋಪಿಗಳಾರು ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಜಾತಿ ನಿಂದನೆ ಮಾಡಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾ 1 ರವರ ಸಂಬಂಧಿಕನಾದ್ದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದು ನಾನು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಯಾರು ಯಾವುದಕ್ಕೆ ಬೆಂಕಿ ಇಟ್ಟರು ಎಂದು ನನಗೆ ಹೇಳಲಾಗುವುದಿಲ್ಲ ಎಂದರೆ ಸರಿ .

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

*ಓದಿ ಹೇಳಿ ಕೇಳಿ ಸರಿ ಇದೆ.*

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.

## ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

### ಸ್ಪೆಷಲ್ ಕೇಸ್ (ಎಸ್.ಸಿ./ಎಸ್.ಟಿ.) ನಂ. 08/2021

ಪ್ರ.ವ.ಬೋ. ದಿನಾಂಕ – 10.01.2024

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | – | ಬಸವರಾಜ | ಫ್ರಾ.ಸಾ. | – | 15 |
| ತಂದೆಯ ಹೆಸರು | – | ಕರಿಯಪ್ಪ | ಚಾ.ಸಾ. | – | 15 |
| ವಯಸ್ಸು | – | 38 ವರ್ಷ | | | |
| ಉದ್ಯೋಗ | – | ಅಂಬ್ಯೂಲೆನ್ಸ್‌ನಲ್ಲಿ ಕೆಲಸ | | | |
| ವಾಸ ಸ್ಥಳ | – | ಕಣಿವೆಜೋಗಿಹಳ್ಳಿ | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಖ್ಯ ವಿಚಾರಣೆ – ವಿಶೇಷ ಸರ್ಕಾರಿ ಅಭಿಯೋಜಕರಿಂದ –**

1. ಚಾಸಾ1 ನನ್ನ ಅತ್ತಿಗೆ , ಚಾಸಾ 7 ನನ್ನ ತಮ್ಮ , ಚಾಸಾ 10 ನನ್ನ ಅಣ್ಣ , ಚಾಸಾ 11 ನನ್ನ ತಂದೆ . ನ್ಯಾಯಾಲಯದ ಮುಂದಿರುವ ಆರೋಪಿಗಳೆಲ್ಲರೂ ಗೊತ್ತು ಅವರು ಗೊಲ್ಲ ಜನಾಂಗದವರು , ನಾವು ಬೋವಿ ಜನಾಂಗದವರು .

2.ದಿಃ 01.08.2020 ರಂದು ನಾವು ಜಮೀನಿನಲ್ಲಿ ಇದ್ದೇವು ಬೆಳಗ್ಗೆ ಸುಮಾರು 11 ಗಂಟೆಯಲ್ಲಿ ಕೆಂಚಪ್ಪ , ಪ್ರಶಾಂತ , ಚಿತ್ತಪ್ಪ , ಚಿತ್ತಪ್ಪ , ಅಂದರೆ ನ್ಯಾಯಾಲಯದ ಮುಂದಿರುವ ಆರೋಪಿಗಳೆಲ್ಲಾರೂ ಹಲ್ಲೆ ಮಾಡಿದರು . ನಮ್ಮ ಜಮೀನಿಗೆ ಬಂದು ಕುರಿ ದನಗಳನ್ನು ಬಿಟ್ಟು ಮೆಕ್ಕೆ ಜೋಳ ಮೇಯಿಸಿದರು . 3 ಸಾವಿರ ಅಡಿಕೆ ಗಿಡಗಳು ಇದ್ದು ಅವುಗಳನ್ನು ಕಿತ್ತು ಸುಟ್ಟು ಹಾಕಿದರು . ಜಮೀನಿನಲ್ಲಿ ಇದ್ದ ಗುಡಿಸಲು ಮನೆ , ಶೆಡ್ ನ್ನು ಸುಟ್ಟು ಹಾಕಿದರು . ಡ್ರಿಪ್ ಪೈಪ್ , Starter , ಮೋಟಾರ್ , ವೈರಿಂಗ್ ನ್ನು ಕುಟ್ಟಿ ಬೆಂಕಿ ಇಟ್ಟು ಸುಟ್ಟು ಹಾಕಿದರು . ಚಾಸಾ 1 , 4, 10 ರಿಂದ 13 ಮತ್ತು ನಾನು ಜಮೀನಿನಲ್ಲಿ ಇದ್ದಾಗ ಒಟ್ಟಾಗಿ ಬಂದು ಕೊಡಲಿ, ಮಚ್ಚುಗಳನ್ನು ಹಿಡಿದುಕೊಂಡು ಬಂದು ಚಾಸಾ 10

ರವರಿಗ ಹಲ್ಲೆ ಮಾಡಿದ್ದು , ನಾವು ತಡೆಯಲು ಪ್ರಯತ್ನಿಸಿದಾಗ ನಮ್ಮ ಮೇಲೆ ಹಲ್ಲೆ ಮಾಡಿದರು . ವಡ್ಡ ಸೂಳೇ ಮಕ್ಕಳಾ ಕೀಳು ಜಾತಿಯವರು ಎಂದು ಜಾತಿ ನಿಂದನೆ ಮಾಡಿದರು , ಗಾಯಾಳುಗಳನ್ನು ಅಂಬ್ಯೂಲೆನ್ಸ್ ನಲ್ಲಿ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋದೆ . ಈ ಎಲ್ಲಾ ವಿಚಾರವನ್ನು ಪೋಲೀಸರಿಗೆ ಹೇಳಿದ್ದೇನೆ .

**– ಪಾಟೀ ಸವಾಲು – 1 ರಿಂದ 11 ನೇ ಆರೋಪಿಗಳ ಪರವಾಗಿ – ಶ್ರೀ ಬಿ.ಎ.ಕೆ ವಕೀಲರಿಂದ –**

3 . ಆರೋಪಿ ಚಿತ್ತಪ್ಪ ನೀಡಿದ ದುಾರಿನ ಮೇರೆಗೆ ನಮ್ಮಗಳ ವಿರುದ್ದ ಪ್ರಕರಣ ದಾಖಲಾಗಿದೆ ಎಂದರೆ ಸರಿ . ಅವರು ಜಮೀನಿನಲ್ಲಿ ಹೋಗುವಾಗ ನಾವು ಹಲ್ಲೆ ಮಾಡಿದ್ದೇವೆ ಎಂದು ನಮ್ಮಗಳ ವಿರುದ್ದ ದೂರು ನೀಡಿದ್ದಾರೆ ಎಂದರೆ ಸರಿ . ಸಂಜೆ ಚಾಸಾ 1 ರವರಿಂದ ಈ ದೂರು ಕೊಡಿಸಿದ್ದೇವೆ ಎಂದರೆ ಸರಿ . ಕೊಡಲಿ ಚಿತ್ತಪ್ಪನ ಕೈಯಲ್ಲಿ ಇತ್ತು . ಮಚ್ಚುಗಳು ತುಂಬಾ ಜನರ ಕೈಯಲ್ಲಿ ಇದ್ದವು . ಸದರಿ ಮಚ್ಚುಗಳಿಂದ ಚಾಸಾ10 ರವರ ಮೇಲೆ ಹಲ್ಲೆಯಾಗಿದ್ದು ಅವರ ತಲೆಗೆ ಪೆಟ್ಟಾಯಿತು. ನನ್ನನ್ನು ದೂಕಾಡಿದರು ನನಗೇನು ಗಾಯವಾಗಲಿಲ್ಲ . ಅಡಿಕೆ ಗಿಡಗಳು ಸುಮಾರು 2 ವರ್ಷದವು . 2 ವರ್ಷದ ಅಡಿಕೆ ಗಿಡಗಳನ್ನು ಘಟನೆ ನಡೆದ 2 –3 ದಿನಗಳಿಂದ ನಮ್ಮ ಜಮೀನಿಗೆ ತಂದು ಹಾಕಿದ್ದೇವು . ಎಲ್ಲಾರೂ ಬೆಂಕಿ ಇಟ್ಟು ಅಡಿಕೆ ಗಿಡವನ್ನು ಕಿತ್ತು ಹಾಕಿ ಬೆಂಕಿ ಇಟ್ಟರು . ಯಾರು ಜಾತಿ ನಿಂದನೆ ಮಾಡಿದರು ಎಂದಲು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ . ಘಟನೆ ನಡೆದ ಸುಮಾರು 1 ವಾರ 15 ದಿನಗಳ ನಂತರ ನನ್ನ ಹೇಳಿಕೆ ಪಡೆದರು . ನಾನು ಹೇಳಿದ್ದನ್ನು ಹೇಳಿಕೆಯಲ್ಲಿ ಬರೆದುಕೊಂಡಿದ್ದಾರೆ . ನಿರ್ದಿಷ್ಟವಾಗಿ ಏನು ಬೈದರು ಎಂದು ಪೋಲೀಸರ ಮುಂದೆ ಹೇಳಿದ್ದೇನೆ . ನಾನು ಅಲ್ಲಿದ್ದು ಬಿಡಿಸಲು ಪ್ರಯತ್ನಿಸಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ನಮ್ಮ ವಿರುದ್ದ ದೂರು ನೀಡಿದ್ದರಿಂದ ಚಾಸಾ 1 ರವರ ಮುಖಾಂತರ ಈ ಸುಳ್ಳು ದೂರು ಕೊಡಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳಾರು ಜಾತಿ ನಿಂದನೆ ಮಾಡಿಲ್ಲ , ಅಡಿಕೆ ಗಿಡ ಕಿತ್ತಿಲ್ಲ , ಬೆಂಕಿ ಇಟ್ಟಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)
ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.